ಶ್ರೀ ಆರಗ ಜ್ಞಾನೇಂದ್ರ :— ಇದುವರೆಗೆ ರಾಜ್ಯದಲ್ಲಿ ಸಮಿತಿಯನ್ನು ರಚನೆ ಮಾಡುವುದಕ್ಕೆ ಏನು ತೊಂದರೆ ಇದೆ? ತಾಲ್ಲೂಕು ಸಮಿತಿಗಳನ್ನು ರಚನೆ ಮಾಡಬೇಕಲ್ಲ. ಅರ್ಜಿ ತಂದು ಕೊಟ್ಟರೂ..

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ಸಮಿತಿಗೋಸ್ಕರ ಕೆಲಸವನ್ನು ನಿಲ್ಲಿಸಿಲ್ಲ. ಅರ್ಜಿಗಳು ಬಂದಿರುವಾಗ ನೇರವಾಗಿ ಕೊಡುತ್ತಿದ್ದೇವೆ. ಸಮಿತಿ ಏಕೆ ಮಾಡುತ್ತಿದ್ದೇವೆಂದರೆ ಆ ವರ್ಗದ ಜನರಿಗೆ ಸರಿಯಾಗಿ ಐಡೆಂಟಿಫೈ ಮಾಡಿ ಕೊಡಲಿಕ್ಕೆ ಎರಡು ಜನ ಹಿಂದುಳಿದ ವರ್ಗದ ಮಹಿಳೆಯರ ನೇಮಕಾತಿ ಮಾಡಬೇಕು, ಎರಡು ಜನ ಅಲ್ಪಸಂಖ್ಯಾತರ ನೇಮಕಾತಿ ಮಾಡಬೇಕೆಂದು ಆದೇಶ ಕೊಡಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ :— ಎಲ್ಲಾ ಜಿಲ್ಲೆಯಲ್ಲಿ ಹಣ ಬಿಡುಗಡೆ ಆಗಿದೆಯಾ? ನಿಮ್ಮ ಟಾರ್ಗೆಟ್ ಇದ್ದಷ್ಟಕ್ಕೆ ಎಲ್ಲಾ ಜಿಲ್ಲೆಗೂ ಹಣ ಬಿಡುಗಡೆ ಮಾಡಿದ್ದೀರಾ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ರಾಜ್ಯದಲ್ಲಿ ಒಂದು ಕೋಟಿ ರೂಪಾಯಿ ಇಟ್ಟುಕೊಂಡಿದ್ದೇವೆ. ಯಾವ್ಯಾವ ಜಿಲ್ಲೆಯ ಅರ್ಜಿ ಬರುತ್ತದೆ, ಆ ಪ್ರಕಾರ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ :— ಆ ಅರ್ಜಿಗಳು ರಾಜ್ಯಕ್ಕೇ ಬರಬೇಕೇ?

ಶ್ರೀ ಮಾಲೀಕಯ್ಯ ವಿ ಗುತ್ತೇದಾರ್ :— ಜಿಲ್ಲಾಧಿಕಾರಿಗಳು ಮಾಹಿತಿ ಒದಗಿಸಿದ ಮೇಲೆ ನಾವು ಇಲ್ಲೇ ನಿರ್ದೇಶನಾಲಯದಲ್ಲಿ ಅದನ್ನು ಸ್ಕ್ರೂಟಿನಿ ಮಾಡಿ ಕಳುಹಿಸತಕ್ಕಂಥ ಒಂದು ಕಾರ್ಯಕ್ರಮ ಇದೆ.

ಶ್ರೀ ಆರಗ ಜ್ಞಾನೇಂದ್ರ :— ಮಾಂಗಲ್ಯ ಭಾಗ್ಯಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಅವಶ್ಯಕತೆ ಇಲ್ಲವಾ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :—ಸಮಿತಿ ಬರುವವರೆಗೆ ಕೆಲಸ ನಿಲ್ಲಿಸುವುದಿಲ್ಲ ಎಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ.

*ಹಾಸನದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ.*

167(1245) ಶ್ರೀ ಹೆಚ್.ಕಿ. ಕುಮಾರಸ್ವಾಮಿ (ಬೇಲೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ನಗರದಲ್ಲಿ ಮೂರು ವರ್ಷಗಳ ಹಿಂದೆ ಅಂಬೇಡ್ಕರ್ ಭವನ ನಿರ್ಮಿಸಲು ಶಂಕುಸ್ಥಾಪನೆ ಮಾಡಿದ್ದು ನಿಜವೇ?

ಅ) ಹಾಗಿದ್ದಲ್ಲಿ, ಅದನ್ನು ನಿರ್ಮಿಸಿ ಪ್ರಾರಂಭಿಸದಿರಲು ಕಾರಣಗಳೇನು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಹೌದು. ದಿನಾಂಕ : 17-3-1996 ರಂದು ಹಾಸನ ನಗರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಶಂಕು ಸ್ಥಾಪನೆ ಮಾಡಿರುತ್ತಾರೆ.

ಆ) ಸರ್ಕಾರದ ಆದೇಶ ಸಂಖ್ಯೆ : ಸಕಾ 364 ಪಹವಿ 95 ದಿನಾಂಕ : 22-12-95ರಲ್ಲಿ ಹಾಸನ ನಗರದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು 20.00 ಲಕ್ಷ ರೂ.ಗಳಿಗೆ ಮಂಜೂರಾತಿ ನೀಡಿರುತ್ತದೆ. ಆದರೆ ಜಿಲ್ಲಾಧಿಕಾರಿಗಳು, ಹಾಸನ ಇವರು ಕರ್ನಾಟಕ ಭೂ ಸೇನಾ ನಿಗಮದಿಂದ ರೂ. 63.00 ಲಕ್ಷ ಅಂದಾಜು ವೆಚ್ಚ ಮತ್ತು ನಕ್ಷೆಯನ್ನು ತಯಾರಿಸಿ ದಿನಾಂಕ : 24-1-97ರಲ್ಲಿ ಸಲ್ಲಿಸಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :— ಮಾನ್ಯ ಅಧ್ಯಕ್ಷರೆ, ಹಾಸನ ನಗರದಲ್ಲಿ ಮೂರು ವರ್ಷಗಳ ಹಿಂದೆ ಅಂಬೇಡ್ಕರ್ ಭವನ ನಿರ್ಮಿಸಲು ಶಂಕುಸ್ಥಾಪನೆ ಮಾಡಿದ್ದು ನಿಜವೆಂದು ಮಾನ್ಯ ಸಚಿವರೇ ಒಪ್ಪಿಕೊಂಡಿದ್ದಾರೆ. ಹಾಸನ ಜಿಲ್ಲಾ ಕೇಂದ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು ರೂ. 63.00 ಲಕ್ಷದ ಅಂದಾಜು ವೆಚ್ಚ ಮತ್ತು ನಕ್ಷೆಯನ್ನು ತಯಾರಿಸಿದ್ದು ರೂ. 20.00 ಲಕ್ಷ ಮಂಜೂರಾತಿಯಾಗಿದೆ. ಅಲ್ಲದೆ, ದಿನಾಂಕ : 24-1-97 ರಂದು ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದು ಪರಿಶೀಲನೆಯಲ್ಲಿದೆಯೆಂದು ತಿಳಿಸಿದ್ದಾರೆ. ಒಂದೂ ಕಾಲು ವರ್ಷದಿಂದ ಪರಿಶೀಲನೆಯಲ್ಲಿರುವುದಕ್ಕೆ ದಯಮಾಡಿ ಕಾರಣ ತಿಳಿಸಬೇಕು.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ಹಾಸನ ನಗರದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು ಅಡಿಗಲ್ಲು ಹಾಕಿದ ನಂತರ ರೂ. 20.00 ಲಕ್ಷಗಳಿಗೆ ಮಂಜೂರಾತಿ ಕೊಟ್ಟಿದ್ದೇವೆ. ಕರ್ನಾಟಕ ಭೂ ಸೇನಾ ನಿಗಮದವರು ಸುಮಾರು ರೂ. 63.00 ಲಕ್ಷದ ಅಂದಾಜು ವೆಚ್ಚ ಮತ್ತು ನಕ್ಷೆಯನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗೋಸ್ಕರ ಕಳುಹಿಸಿದ್ದರು. ಜಿಲ್ಲಾ ಪಂಚಾಯತ್ ನಿಂದ ಹೆಚ್ಚುವರಿಯಾಗಿರುವ ಹಣ ಹಾಗೂ ಬೇರೆ ಸಂಘ-ಸಂಸ್ಥೆಗಳಿಂದ ಕ್ರೋಢೀಕರಿಸಿದ ಹಣವನ್ನು ಕಳುಹಿಸಿ ಮಂಜೂರಾತಿ ಪಡೆಯಬೇಕಾಗಿತ್ತು ಮತ್ತು ನಿವೇಶನದ ಬಗ್ಗೆ ಸ್ವಲ್ಪ ತಕರಾರು ಇತ್ತು. ಆದುದರಿಂದ, ಈಗ ಅದನ್ನು ಸಮಾಜಕಲ್ಯಾಣ ಇಲಾಖೆ ವಶಕ್ಕೆ ತೆಗೆದುಕೊಂಡು ಒಂದು ವಾರದೊಳಗೆ ಅದಕ್ಕೆ ಮಂಜೂರಾತಿ ಕೊಡುತ್ತೇನೆ ಮತ್ತು ಸದರಿ ನಿವೇಶನದಲ್ಲಿ ಅಂಬೇಡ್ಕರ್ ಭವನ ಕಟ್ಟಡದ ಕೆಲಸ ಪ್ರಾರಂಭಿಸಲು ಸೂಕ್ತ ಆದೇಶ ಕೊಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :— ಈಗಾಗಲೇ ಮೂರು ವರ್ಷ ಕಳೆದಿದ್ದು, ಆಡಳಿತಾತ್ಮಕ ಮಂಜೂರಾತಿ ಕೊಡುವುದಕ್ಕೆ ಬೇರೆ ಪ್ರಕ್ರಿಯೆ ಏನಿತ್ತು? ಮಾನ್ಯ ಸಚಿವರು

ಬರೀ ಅಂದಾಜು ವೆಚ್ಚದ ಬಗ್ಗೆ ಹೇಳಿದ್ದಾರೆ. ಅಲ್ಲಿ ನಿವೇಶನಕ್ಕೆ ಸಂಬಂಧಿಸಿದಂತೆ ನಿಜವಾದ ಸಮಸ್ಯೆಯಿದೆ.ಸದರಿ ನಿವೇಶನದ ಜಾಗ ಹಿಂದೆ ಪೂರ್ತಿಯಾಗಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿತ್ತ. ಅಲ್ಲದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೂಡ ಅದರಲ್ಲಿದ್ದು ಪ್ರಮಾಣೀಕೃತ ಶಾಲೆಗೆ ಆ ಜಾಗವನ್ನು ಸುಮ್ಮನೆ ಕೊಡಲಾಗಿತ್ತು. ಜಾಗ ಕೊಡುವಾಗ ಬರವಣಿಗೆಯಲ್ಲೂ ಕೊಟ್ಟಿಲ್ಲ, ಖಾತೆ ಮಾಡಿಯೂ ಕೊಟ್ಟಿಲ್ಲ. ಈಗ ಸಮಾಜ ಕಲ್ಯಾಣ ಇಲಾಖೆ ವಶದಲ್ಲಿ ಜಾಗವಿದ್ದರೂ ಕೂಡ ಎ.ಕೆ. ಬೋರ್ಡಿಂಗ್ ಹೋಮ್‌ನವರು ಆ ಜಾಗ ತಮ್ಮದೆಂದು ಹೇಳುತ್ತಿದ್ದಾರೆ. ಒಟ್ಟಾರೆ ನಿವೇಶನದಲ್ಲಿ ಒಂದು ಎಕರೆ 37 ಗುಂಟೆಯಿದ್ದು, ನಾವು ಕೇಳುತ್ತಿರುವುದು ಕೇವಲ 26 ಗುಂಟೆ. ಅಲ್ಲಿರುವವರೂ ಕೂಡ ಪ್ರಮಾಣೀಕೃತ ಶಾಲೆಯ ಮಕ್ಕಳಾಗಿದ್ದು, ಅವರು ಬಡವರಾಗಿದ್ದು ನಮ್ಮದೇನೂ ತಕರಾರಿಲ್ಲ. ಅದುದರಿಂದ, ಪ್ರತ್ಯೇಕವಾಗಿರುವ ನಿವೇಶನವನ್ನು ಆದಷ್ಟು ಬೇಗ ಸ್ವಾಧೀನಪಡಿಸಿಕೊಂಡು ಕೊನೇ ಪಕ್ಷ ಬರುವ ಏಪ್ರಿಲ್ 14ನೇ ತಾರೀಖಿನಂದು ಅಲ್ಲಿ ಗುದ್ದಲಿ ಪೂಜೆ ಮಾಡಲೇಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :— ಮಾಡುತ್ತೇವೆ.

*ಸಂತೇಮಾರನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು.*

168(1226) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನೂತನ ಚಾಮರಾಜನಗರ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕಾ ಕೇಂದ್ರಗಳ ಸಂಖ್ಯೆ ಎಷ್ಟು? ಹೊಸದಾಗಿ ಸಣ್ಣ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆಯೇ ಹಾಗಿದ್ದಲ್ಲಿ ಅವುಗಳನ್ನು ಸ್ಥಾಪಿಸಲಾಗುವ ಸ್ಥಳಗಳಾವುವು?

ಆ) ಸಂತೇಮಾರನಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸಣ್ಣ ಕೈಗಾರಿಕಾ ಕೇಂದ್ರಗಳಷ್ಟು ಹೊಸದಾಗಿ ಸಣ್ಣ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆಯೇ ಹಾಗಿದ್ದಲ್ಲಿ ಎಲ್ಲೆಲ್ಲಿ ಸ್ಥಾಪಿಸಲಾಗುವುದು?

ಇ) ಸಂತೇಮಾರನಹಳ್ಳಿ ಕೇಂದ್ರ ಸ್ಥಾನದಲ್ಲಿ ಸಣ್ಣ ಕೈಗಾರಿಕಾ ಇಲಾಖಾ ಮತಿಯಿಂದ ಕೈಗಾರಿಕಾ ಶೆಡ್‌ಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ. ಇದ್ದಲ್ಲಿ, ಸ್ಥಳಗಳಾವುವು? (ವಿವರ ನೀಡುವುದು);

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) ನೂತನ ಚಾಮರಾಜನಗರ ಜಿಲ್ಲೆಯಲ್ಲಿ ಜನವರಿ 99ರ ಅಂತ್ಯಕ್ಕೆ 1,5.589 ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ನೋಂದಾಯಿಸಲಾಗಿದೆ. 1998-99ನೇ ಸಾಲಿನಲ್ಲಿ